**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ರವರ ನ್ಯಾಯಾಲಯ, ಕೊಪ್ಪ**

**<u>ಸಿ. ಸಿ. ನಂ. 06/2025</u>**

**<u>ಫಿರ್ಯಾಧಿದಾರರುಃ</u>** **ರಾಜ್ಯದ ಪರವಾಗಿ: ಹರಿಹರಪುರ ಪೋಲೀಸರು**

**-ವಿರುದ್ಧ-**

<u>ಆರೋಪಿ/ತರುಃ</u> ಶರತ್ ಬಿನ್ ಭಾಸ್ಕರ್, 29 ವರ್ಷ, ಕೂಲಿ ಕೆಲಸ, ವಾಸ ಸ್ವಂತ ವಿಳಾಸ ಮಾಲಗೂಡಿಗೆ, ಮೇಲ್ ಕೊಪ್ಪ ಗ್ರಾಮ, ಶೃಂಗೇರಿ ತಾಲ್ಲೂಕು, ಹಾಲಿ ವಿಳಾಸ ಮಾವಿನಕಟ್ಟೆ, ಕೊಪ್ಪ ತಾಲ್ಲೂಕು.

**<u>ದೋಷಾರೋಪಣೆ</u>**

ಶ್ರೀಮತಿ ನಂದಿನಿ ಎಂ.ಎನ್., ಬಿ.ಎ., ಎಲ್.ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ಕೊಪ್ಪ, ಆದ ನಾನು ಮೇಲ್ಕಂಡ ಆರೋಪಿತಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಹರಿಹರಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕೋಡೂರು ಗ್ರಾಮದ ಮಾವಿನಕಟ್ಟೆಯ ಆರೋಪಿಯಾದ ನೀವು ಕಳ್ಳತನ ಮಾಡುವ ಉದ್ದೇಶದಿಂದ ಚಾಸಾ.1 ಉಮಾ ರವರ ಮನೆಗೆ ದಿನಾಂಕ 09.11.2025 ರಂದು ಬೆಳಿಗ್ಗೆ ಸುಮಾರು 10.30 ಗಂಟೆಗೆ ಹಿಂಬಾಗಿಲಿನಿಂದ ಮನೆ ಒಳಗೆ ಪ್ರವೇಶ ಮಾಡಿ **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 331(3)**ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸಂದರ್ಭದಲ್ಲಿ ಆರೋಪಿಯಾದ ನೀವು ಮುಂದುವರೆದು ಚಾಸಾ-1 ರವರ ಮನೆಯ ಒಳಗಡೆ ಅತಿಕ್ರಮ ಪ್ರವೇಶ ಮಾಡಿ ಬೆಡ್ ರೂಮಿನ ಮಂಚದ ಮೇಲಿನ ಹಾಸಿಗೆಯ ಅಡಿಯಲ್ಲಿ ಇಟ್ಟಿದ್ದ ರೂ.6000/- ಹಣವನ್ನು ಅಪ್ರಮಾಣಿಕತನದಿಂದ ಕಳ್ಳತನ ಮಾಡಿ, **ಭಾರತೀಯ ನ್ಯಾಯ ಸಂಹಿತ (ಬಿ.ಎನ್.ಎಸ್.), 2023 ಕಲಂ 305(ಎ)**ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರಃ1ಃ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉಃ ತಿಳಿಯಿತು.

ಪ್ರ:2ಃ ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕಾ?

ಉಃ ವಿಚಾರಣೆಯಾಗಬೇಕು.

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಡೀಕರಿಸುತ್ತೇನೆ.

ದಿನಾಂಕ 30.01.2026

ಸಹಿ/- 30.01.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.